96.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಮಾಂಜ್ರಾ ನದಿಗೆ ಅಡ್ಡಲಾಗಿ ಬ್ರಿಡ್ಜ್-ಕಂ-ಬ್ಯಾರೇಜ್ ಕಾಮಗಾರಿ

1398 (1764) - ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಜಾವತ್ ಅವಾರ್ಡ್ ಪ್ರಕಾರ ಗೋದಾವರಿ ಬೇಸಿನ್ ಅಡಿಯಲ್ಲಿ ಮಾಂಜ್ರಾ ನದಿಗೆ ಅಡ್ಡಲಾಗಿ (ಬೀದರ್ ಜಿಲ್ಲೆ) Bridge-cum-Barrage ಗಳ ಕಟ್ಟಲು ಸರ್ಕಾರ ಉದ್ದೇಶಿಸಿರುತ್ತದೆಯೇ;

ಆ) ಹಾಗಾದರೆ, ಯಾವ ಯಾವ point ನಲ್ಲಿ ಈ ಯೋಜನೆ ಹಮ್ಮಿಕೊಳ್ಳಲಾಗಿದೆ; ಇಂತಹ ಯೋಜನೆಗೆ ತಗಲುವ ವೆಚ್ಚವೆಷ್ಟು; ಇಂತಹ ಯೋಜನೆಗಳು ಈಗ ಯಾವ ಹಂತದಲ್ಲಿರುತ್ತವೆ; ಸದರಿ ಕಾಮಗಾರಿ ನಿರ್ಮಾಣ ಪ್ರಾರಂಭಿಸುವುದು ಯಾವಾಗ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಹೌದು

ಆ) ಜಿಗಿಹಾಳ್, ಮಾಣಿಕೇಶ್ವರ, ಹಾಲಹಳ್ಳಿ ಮತ್ತು ಚಂದಾಪುರ್‌ಗಳಲ್ಲಿ ಈ ಯೋಜನೆ ಹಮ್ಮಿಕೊಳ್ಳಲಾಗಿದೆ.

ಈ ಯೋಜನೆಗೆ ತಗಲುವ ವೆಚ್ಚ ಈ ಕೆಳಗಿನಂತಿದೆ.

1. ಜಿರಿಗಿಹಾಳ್ - ರೂ. 641.00 ಲಕ್ಷಗಳು
2. ಮಾಣಿಕೇಶ್ವರ - ರೂ. 516.00 ಲಕ್ಷಗಳು
3. ಹಾಲಹಳ್ಳಿ - ರೂ. 520.00 ಲಕ್ಷಗಳು
4. ಚಂದಾಪುರ - ರೂ. 499.00 ಲಕ್ಷಗಳು

ಮೇಲಿನ ಯೋಜನೆಗಳ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಅನುಮೋದನೆಯ ನಂತರ ಪ್ರಾರಂಭಿಸಲಾಗುವುದು.

ಔರಾದ್ ತಾಲ್ಲೂಕಿನ ಆಲೂರ-ಬೇಲೂರ ಕೆರೆ ನಿರ್ಮಾಣಕ್ಕೆ ಭೂಸ್ವಾಧೀನ

1399 (1765) - ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನ ಆಲೂರ ಬೇಲೂರ ಸಣ್ಣಕೆರೆ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆಯೇ, ಅದಕ್ಕಾಗಿ ಸ್ವಾಧೀನ ಪಡಿಸಿಕೊಂಡ ಸಾಗುವಳಿ ಜಮೀನು ಎಷ್ಟು, ಇಂತಹ ಜಮೀನುಗಳ ಬಗ್ಗೆ ಭೂಸ್ವಾಧೀನ ಪ್ರಕರಣ ಪೂರ್ಣಗೊಂಡು ಪರಿಹಾರಧನ ನೀಡಲಾಗಿದೆಯೇ.